# ರಾಜನ ಮೂರು ಪ್ರಶ್ನೆಗಳು



ಸಾವನದುರ್ಗ ಎಂಬ ರಾಜ್ಯವನ್ನು ಮಹಿಪಾಲನೆಂಬ ಅರಸನು ಆಳುತ್ತಿದ್ದನು. ತನ್ನ ರಾಜ್ಯದಲ್ಲಿ ಎಲ್ಲ ಪ್ರಜೆಗಳಿಗೆ ಸುಖ–ಶಾಂತಿ ನೆಲೆಸುವಂತೆ ಮಾಡಿದ್ದನು. ರಾಜನು ಸದಾ ಯೋಚನೆ ಮಾಡುತ್ತಿದ್ದನು. ಆಗ ರಾಜನಿಗೆ ಮೂರು ಪ್ರಶ್ನೆಗಳು ಕಾಡತೊಡಗಿದವು. ಪ್ರತಿಯೊಂದು ಕೆಲಸಕ್ಕೆ ಸರಿಯಾದ ವೇಳೆ ಯಾವುದು; ಅತ್ಯಂತ ಅವಶ್ಯಕತೆಯಿರುವ ಜನರು ಯಾರು ಮತ್ತು ಅತ್ಯಂತ ಮಹತ್ವದ ಕೆಲಸವನ್ನು ಯಾವಾಗ ಮಾಡಬೇಕು. ಈ ಮೂರು ಪ್ರಶ್ನೆಗಳಿಗೆ ಯಾರು ಸಮಂಜಸವಾಗಿ ಉತ್ತರ ಕೊಡುತ್ತಾರೆಯೋ ಅಂಥವರಿಗೆ ಬಹುಮಾನ ನೀಡಿ ಸನ್ಮಾನಿಸಲಾಗುವದು ಎಂದು ತನ್ನ ರಾಜ್ಯದ ತುಂಬೆಲ್ಲ ಡಂಗೂರ ಹೊಡೆಸಿದನು.

ರಾಜ್ಯದಲ್ಲಿ ಅನೇಕ ಪಂಡಿತರು, ಅನುಭವಿಗಳು, ಹಿರಿಯರು ರಾಜನ ಈ ಮೂರು ಪ್ರಶ್ನೆಗಳಿಗೆ ಉತ್ತರ ಕೊಡಲು ನಾ ಮುಂದು, ನೀ ಮುಂದು ಎಂದು ಬರತೊಡಗಿದರು. ಆದರೆ ಯಾರಿಂದಲೂ ಸಮರ್ಪಕ ಉತ್ತರ ದೊರೆಯದ ರಾಜನಿಗೆ ಅಸಮಾಧಾನವಾಯಿತು. ತನ್ನ ರಾಜ್ಯದಲ್ಲಿ ಯಾರೂ ಈ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುವವರಿಲ್ಲವೇ ಎಂದು ಚಿಂತಾಕ್ರಾಂತನಾದನು.

ಕೆಲವು ದಿನಗಳು ಕಳೆದ ನಂತರ ಒಬ್ಬ ಸಾಮಾನ್ಯನಿಂದ ಈ ಪ್ರಶ್ನೆಗಳಿಗೆ ಉತ್ತರ ದೊರೆಯಬಹುದೆಂದು ಯೋಚಿಸಿದ. ತಾನು ರಾಜನಂತೆ ಹೋಗದೆ ಒಬ್ಬ ಸಾಮಾನ್ಯ ಮನುಷ್ಯನಾಗಿ ಹೋಗುವುದು ಒಳ್ಳೆಯದೆಂದು ಭಾವಿಸಿ ತಕ್ಷಣವೇ ಒಬ್ಬ ರೈತನ ವೇಷಧಾರಿಯಾಗಿ ಪ್ರಯಾಣ ಬೆಳೆಸಿದನು. ಊರು ದಾಟಿ ಅರಣ್ಯ ಪ್ರದೇಶಕ್ಕೆ ಬಂದನು.

ದೂರದಲ್ಲಿ ಒಬ್ಬ ನೆಲವನ್ನು ಅಗೆಯುತ್ತಿದ್ದನು. ರಾಜನು ತನ್ನ ಸಿಬ್ಬಂದಿಯನ್ನು ದೂರದಲ್ಲಿ ನಿಲ್ಲಿಸಿ ತಾನೊಬ್ಬನೇ ಆ ವ್ಯಕ್ತಿಯ ಹತ್ತಿರ ಬಂದನು. ಆ ವ್ಯಕ್ತಿ ತನ್ನ ಕೆಲಸದಲ್ಲಿ ನಿರತನಾಗಿದ್ದನು. ಮಾರುವೇಷದ ರಾಜನು 'ಓ ಮಹಾಶಯ, ನಾನು ನಿನ್ನಲ್ಲಿಗೆ ಬಂದಿರುವುದು ನನ್ನ ಪ್ರಶ್ನೆಗಳಿಗೆ ಉತ್ತರ ಪಡೆಯಲು. ದಯವಿಟ್ಟು ಉತ್ತರಿಸುತ್ತೀಯಾ?' ಎಂದನು. ಆ ವನವಾಸಿ 'ಆಗಲಿ ಕೇಳಿ' ಎಂದನು.

ಆಗ ರಾಜನು ತನ್ನ ಮೂರು ಪ್ರಶ್ನೆಗಳು ಹೀಗಿವೆ ಎಂದು ಮೂರು ಪ್ರಶ್ನೆಗಳನ್ನು ಅವನ ಮುಂದಿಟ್ಟನು. ಆಗ ಆ ವನವಾಸಿ, ಈ ಪ್ರಶ್ನೆಗಳನ್ನು ಕೇಳಿ ಮೌನ ಧರಿಸಿ ತನ್ನ ಕೆಲಸದಲ್ಲಿ ನಿರತನಾದನು. ಆ ವನವಾಸಿ ಸ್ವಲ್ಪ ಅಶಕ್ತನಿದ್ದನು. ನೆಲವನ್ನು ಅಗೆದು ಅಗೆದು ನಿತ್ರಾಣಗೊಂಡನು. ಇದನ್ನು ಕಂಡ ಅರಸನು 'ಓ ಮಹನೀಯ, ನೀನು ಈಗ ದಣಿದಿರುವೆ. ನಾನು ಸ್ವಲ್ಪ ಅಗೆಯುತ್ತೇನೆ. ನೀನು ವಿಶ್ರಾಂತಿ ತೆಗೆದುಕೋ' ಎಂದು ಹೇಳಿ ಗುದ್ದಲಿಯಿಂದ ತಾನು ನೆಲವನ್ನು ಅಗೆಯಲು ಪ್ರಾರಂಭಿಸಿದನು.

ಅಷ್ಟರಲ್ಲಿ ಸಂಜೆಯಾಯಿತು. ಆಗ ರಾಜನು 'ನೀನು ನನ್ನ ಪ್ರಶ್ನೆಗಳಿಗೆ ಉತ್ತರ ಕೊಡಲಿಲ್ಲ. ಈಗ ನೀನು ಉತ್ತರ ಕೊಡದಿದ್ದರೆ ನಾನು ಮರಳಿ ಮನೆಗೆ ಹೋಗುತ್ತೇನೆ' ಎಂದನು.

ಅಷ್ಟರಲ್ಲಿ ಗಡ್ಡದ ಮನುಷ್ಯನೊಬ್ಬ ಈ ವನವಾಸಿಯ ಕಡೆಗೆ ಓಡುತ್ತಾ ಬರತೊಡಗಿದನು. ಅವನ ಹೊಟ್ಟೆಯಿಂದ ರಕ್ತ ಸುರಿಯುತ್ತಿತ್ತು. ಬಂದವನೇ ದೊಪ್ಪನೆ ಆ ವನವಾಸಿಯ ಹತ್ತಿರ ಬಿದ್ದುಬಿಟ್ಟನು. ರಾಜನು ಇವನನ್ನು ನೋಡಿ ಕೂಡಲೇ ಹೊಟ್ಟೆಗೆ ಒಂದು ಪಟ್ಟಿ ಕಟ್ಟಿ ರಕ್ತ ಬರುವುದನ್ನು ನಿಲ್ಲಿಸಿದನು. ಇಬ್ಬರೂ ಕೂಡಿ ಹೊತ್ತೊಯ್ದು ವನವಾಸಿಯ ಗುಡಿಸಲಿನಲ್ಲಿ ಮಲಗಿಸಿದರು.

ಕುಡಿಯಲಿಕ್ಕೆ ನೀರು ಕೊಟ್ಟಾಗ ಆ ಗಡ್ಡದ ಮನುಷ್ಯ ಚೇತರಿಸಿಕೊಂಡನು. ಕೂಡಲೆ ರಾಜನ ಕಡೆಗೆ ಹೊರಳಿ, 'ಮಹಾರಾಜ ನಿಮಗೆ ಧನ್ಯವಾದಗಳು. ನೀವು ನನ್ನ ಜೀವವನ್ನು ಉಳಿಸಿದಿರಿ' ಎಂದಾಗ ರಾಜನಿಗೆ ಒಮ್ಮೆಲೆ ಆಶ್ಚರ್ಯವಾಯಿತು.

'ನನ್ನ ಪರಿಚಯ ನಿನಗೆ ಹೇಗಾಯಿತು?' ಎಂದು ಕೇಳಿದಾಗ ಆ ಗಡ್ಡಧಾರಿ 'ಮಹಾರಾಜ, ನೀವು ಈಗ ಮಾರುವೇಷದಲ್ಲಿ ಬಂದಿದ್ದೀರಿ. ನೀವು ಸೋದರನ ಆಸ್ತಿಯನ್ನು ಕಬಳಿಸಿ ಅವನನ್ನ ಗಲ್ಲಿಗೇರಿಸಿದಿರಿ. ಅಂದಿನಿಂದ ನಿಮ್ಮ ಮೇಲೆ ಸೇಡು ತೀರಿಸಿಕೊಳ್ಳಲು ಹವಣಿಸುತ್ತಿದ್ದೆ. ನೀವು ಮಾರುವೇಷದಲ್ಲಿ ಈ ವನವಾಸಿಯ ಕಡೆಗೆ ಬರುವುದನ್ನು ಕಂಡೆ. ನೀವು ಅಂಗರಕ್ಷಕರನ್ನು ದೂರದಲ್ಲಿ ನಿಲ್ಲಿಸಿರುವುದನ್ನು ನೋಡಿದೆ. ನೀವು ಸಂಜೆ ಮರಳಿ ಬರುತ್ತೀರಿ ಎಂದು ನಿಮ್ಮನ್ನು ಕೊಲ್ಲಲು ಅಡಗಿ ಕುಳಿತೆ. ಆದರೆ ನೀವು ಬರಲಿಲ್ಲ. ನಿಮ್ಮ ಅಂಗರಕ್ಷಕರು ನನ್ನನ್ನು ಗುರುತಿಸಿ ನನ್ನ ಮೇಲೆ ಹಲ್ಲೆ ಮಾಡಿದರು. ನನ್ನ ಹೊಟ್ಟೆಗೆ ಗಾಯವಾಯಿತು. ಅವರಿಂದ ತಪ್ಪಿಸಿಕೊಂಡು ಓಡಿ ಇತ್ತ ಬಂದೆ. ನೀವು ಮತ್ತು ವನವಾಸಿ ಕೂಡಿ ನನ್ನ ಜೀವ ಉಳಿಸಿದಿರಿ. ಅದಕ್ಕಾಗಿ ನಾನು ಆಜನ್ಮ ನಿಮಗೆ ಚಿರಋಣಿ. ನನ್ನ ಜೀವನ ಪರ್ಯಂತ ನಾನು ನಿಮ್ಮ ಸೇವಕನಾಗಿ ದುಡಿಯುವೆ' ಎಂದಾಗ ರಾಜನಿಗೆ ಅತೀವ ಸಂತೋಷವಾಯಿತು.

ರಾಜನು ತನ್ನ ಅರಮನೆಗೆ ಹೊರಡಲು ಸಿದ್ಧನಾದನು. ಆಗ ಹೋಗುವ ಮುನ್ನ ಇನ್ನೊಮ್ಮೆ ಆ ವನವಾಸಿಯನ್ನು ತನ್ನ ಪ್ರಶ್ನೆಗಳಿಗೆ ಉತ್ತರ ಕೇಳಬೇಕೆಂದು ಮನಸ್ಸಾಯಿತು. ಆ ವನವಾಸಿಯ ಕಡೆಗೆ ಹೊರಳಿ 'ಓ ವನವಾಸಿಯೇ, ಈಗಲಾದರೂ ನೀನು ನನ್ನ ಪ್ರಶ್ನೆಗೆ ಉತ್ತರ ಕೊಡುವೆಯಾ?' ಎಂದ.

ಆತ, 'ಮಹಾರಾಜ, ಆಗಲೇ ನಿಮ್ಮ ಪ್ರಶ್ನೆಗೆ ಉತ್ತರ ದೊರಕಿದೆಯಲ್ಲ' ಎಂದಾಗ ರಾಜನಿಗೆ ಆಶ್ಚರ್ಯವಾಗಿ ಅದು ಹೇಗೆ ಎಂದು ಪ್ರಶ್ನಿಸಿದನು.

'ನೋಡಿ ನಾನು ಸಸಿಗಾಗಿ ಭೂಮಿಯನ್ನು ಅಗೆಯುವಾಗ ನನ್ನ ಅಶಕ್ತತೆಯನ್ನು ಗಮನಿಸಿ ನೀವು ನನಗೆ ವಿಶ್ರಾಂತಿ ಕೊಟ್ಟು ಅಗೆಯಲಿಕ್ಕೆ ಶುರು ಮಾಡಿದಿರಿ. ಅದುವೇ ಅತ್ಯಂತ ಮಹತ್ವದ ಸಮಯ. ಆಗ ನಾನೂ ಸಹ ಅತ್ಯಂತ ಮಹತ್ವದ ವ್ಯಕ್ತಿಯಾದೆ. ಮತ್ತೂ ಹೇಳಬೇಕಾದರೆ ಗಾಯವಾದ ಗಡ್ಡದ ಮನುಷ್ಯ ಬಂದಾಗ ಅವನ ಗಾಯವನ್ನು ವಾಸಿ ಮಾಡಲೋಸುಗ ಪಟ್ಟಿಯನ್ನು ಕಟ್ಟಿ ಜೀವ ಉಳಿಸಿದಿರಿ. ಅವನೂ ಸಹ ಅತ್ಯಂತ ಮಹತ್ವದ ವ್ಯಕ್ತಿ. ಅವನಿಗೆ ಶುಶ್ರೂಷೆ ಮಾಡಿದುದು ಸಹ ಅತ್ಯಂತ ಮಹತ್ವದ ವೇಳೆಯಲ್ಲವೆ! ನಿಮ್ಮೆಲ್ಲ ಪ್ರಶ್ನೆಗಳಿಗೆ ನಡೆದ ಈ ಒಂದೊಂದು ಘಟನೆಗಳೇ ಸಾಕ್ಷಿ' ಎಂದು ಹೇಳಿದ ವನವಾಸಿ. ರಾಜನು ಸಂತೋಷಪಟ್ಟು ವನವಾಸಿಯನ್ನು ತನ್ನ ದರ್ಬಾರಿಗೆ ಕರೆಸಿ ಸನ್ಮಾನ ಮಾಡಿ ಕಳುಹಿದನು.

**–ನಾಗರಾಜ ಅಂಗಡಿ, ಬೆಳಗಾವಿ**